21

# ಕರ್ನಾಟಕ ಸರ್ಕಾರ

ಸಂ:ಗ್ರಾಅಪ/31/ಗಣಕ ಕೋಶ-2014

ಕರ್ನಾಟಕ ಸರ್ಕಾರದ ಸಚಿವಾಲಯ
ಬಹುಮಹಡಿ ಕಟ್ಟಡ,
ಬೆಂಗಳೂರು,ದಿನಾಂಕ:22.08.2014

**ಇಂದ:**
ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು
ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆ
ಬಹುಮಹಡಿಗಳ ಕಟ್ಟಡ
**ಬೆಂಗಳೂರು.**

**ಇವರಿಗೆ:**
ಮುಖ್ಯ ಕಾರ್ಯಾಚರಣೆ ಅಧಿಕಾರಿಗಳು
ಕರ್ನಾಟಕ ರೂರಲ್ ರೋಡ್ ಡೆವಲಪ್‌ಮೆಂಟ್ ಏಜೆನ್ಸಿ,
**ಬೆಂಗಳೂರು.**

**ಮಾನ್ಯರೇ,**

**ವಿಷಯ:** ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆಯಲ್ಲಿ ಅನುಷ್ಠಾನಗೊಳಿಸಲಾಗುತ್ತಿರುವ ಕಾಮಗಾರಿಗಳ ಪಾವತಿಯನ್ನು ಗಾಂಧಿ ಸಾಕ್ಷಿ ಕಾಯಕ(ವರ್ಕ್‌ಸಾಫ್ಟ್) ತಂತ್ರಾಂಶದ ಮೂಲಕ ಮಾಡುವ ಕುರಿತು.

*******

ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆಯಲ್ಲಿ ಅನುಷ್ಠಾನಗೊಳಿಸಲಾಗುತ್ತಿರುವ ಅನುಮೋದನೆಗೊಂಡ ಕ್ರಿಯಾಯೋಜನೆಯಲ್ಲಿರುವ ಎಲ್ಲಾ ಯೋಜನೆಗಳ ಎಲ್ಲಾ ಕಾಮಗಾರಿಗಳ ವಿವರಗಳನ್ನು ಗಾಂಧಿ ಸಾಕ್ಷಿ ಕಾಯಕ (ವರ್ಕ್‌ಸಾಫ್ಟ್) ತಂತ್ರಾಂಶದಲ್ಲಿ ಅಳವಡಿಸಿ ಹಣಪಾವತಿಯನ್ನು ಗಾಂಧಿ ಸಾಕ್ಷಿ ಕಾಯಕ ತಂತ್ರಾಂಶದಿಂದ ಪಡೆಯಲಾದ ಪಾವತಿ ಆದೇಶವಿದ್ದಲ್ಲಿ ಮಾತ್ರ ಕಾಮಗಾರಿಗಳ ಬಿಲ್ಲುಗಳ ಪಾವತಿಯನ್ನು ಕಡ್ಡಾಯವಾಗಿ ಮಾಡುವಂತೆ ಈಗಾಗಲೇ ನಿರ್ದೇಶನ ನೀಡಲಾಗಿರುತ್ತದೆ. ಗಾಂಧಿ ಸಾಕ್ಷಿ ಕಾಯಕ (ವರ್ಕ್‌ಸಾಫ್ಟ್) ತಂತ್ರಾಂಶದ ಮೇಲ್ವಿಚಾರಣೆ ಕುರಿತಂತೆ ಈ ಕೆಳಕಂಡ ವ್ಯವಸ್ಥೆಗಳನ್ನು ಕೂಡಲೇ ಕೈಗೊಳ್ಳಲು ಸೂಚಿಸಿದೆ.

1) ಜಿಲ್ಲಾ ಪಂಚಾಯತ್ ಹಂತದಲ್ಲಿ ಪ್ರತಿದಿನ ತಮ್ಮ ಜಿಲ್ಲೆಯ ಹಂತದಲ್ಲಿ ಪ್ರತೀ ಅನುಷ್ಠಾನ ಇಲಾಖೆಯು ಅನುಷ್ಠಾನಗೊಳಿಸುವ ಕಾಮಗಾರಿಗಳ ವಿವರಗಳನ್ನು ಗಾಂಧಿ ಸಾಕ್ಷಿ ಕಾಯಕ (ವರ್ಕ್‌ಸಾಫ್ಟ್) ತಂತ್ರಾಂಶದಲ್ಲಿ ವಿವರಗಳನ್ನು ಅಳವಡಿಸಿರುವ ಕುರಿತು ಪರಿಶೀಲಿಸಲು ಹಾಗೂ ವರದಿ ತಯಾರಿಸಲು ಇ-ಪಂಚಾಯತ್ MIS-Coordinator ರವರನ್ನು ಒಳಗೊಂಡ ಒಂದು ತಂಡ ರಚಿಸಿ ಅವರ ಸೇವೆಯನ್ನು ಉಪಯೋಗಿಸುವುದು. ಇವರೊಂದಿಗೆ ಇಲಾಖೆಯ ಕಾಮಗಾರಿಗಳ ಕುರಿತು ಅಗತ್ಯ ಜ್ಞಾನವುಳ್ಳ ಅಧಿಕಾರಿ/ಸಿಬ್ಬಂದಿಯನ್ನು ಕಡ್ಡಾಯವಾಗಿ ಸೇರಿಸುವುದು. ಸದರಿ ತಂಡದವರಿಂದ ಪ್ರತಿದಿನ ಗಾಂಧಿ ಸಾಕ್ಷಿ ಕಾಯಕ (ವರ್ಕ್‌ಸಾಫ್ಟ್) ತಂತ್ರಾಂಶದಲ್ಲಿ ಅಳವಡಿಸಿರುವ ಕಾಮಗಾರಿಗಳ ಮಾಹಿತಿಯನ್ನು ಪರಿಶೀಲಿಸಿ ಇ-ಮೇಲ್ ಮೂಲಕ ವರದಿ ಪಡೆಯುವುದು. ಸದರಿ ವರದಿಯನ್ನು ತಮ್ಮ ಹಂತದಲ್ಲಿ ಪರಿಶೀಲಿಸುವುದು ಮತ್ತು ನಿಗದಿಪಡಿಸಿದ ಮಾನದಂಡಗಳಿಗೆ ಮತ್ತು ನಿಯಮಗಳಿಗೆ ವ್ಯತಿರಿಕ್ತವಾಗಿ ಮಾಹಿತಿಯನ್ನು ಗಾಂಧಿ ಸಾಕ್ಷಿ ಕಾಯಕ (ವರ್ಕ್‌ಸಾಫ್ಟ್) ತಂತ್ರಾಂಶದಲ್ಲಿ ಅಳವಡಿಸಿರುವುದು ಕಂಡುಬಂದಲ್ಲಿ ಕೂಡಲೇ ಅಂಥವರ ವಿರುದ್ಧ ನಿಯಮಾನುಸಾರ ಸೂಕ್ತ ಶಿಸ್ತುಕ್ರಮ ತೆಗೆದುಕೊಳ್ಳುವುದು ಹಾಗೂ ಸರ್ಕಾರಕ್ಕೆ ವರದಿ ಮಾಡುವುದು.

2) ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆಯಲ್ಲಿ (PRED, ತಾಲ್ಲೂಕು ಪಂಚಾಯತ್) ಅನುಷ್ಠಾನಗೊಳಿಸಲಾಗುತ್ತಿರುವ ಕಾಮಗಾರಿಗಳ ಪಾವತಿಯನ್ನು ಗಾಂಧಿ ಸಾಕ್ಷಿ ಕಾಯಕ ತಂತ್ರಾಂಶದ ಮೂಲಕ ಪಾವತಿ ಮಾಡಿದ ಕುರಿತು ಪ್ರತಿ ತಿಂಗಳು 10ನೇ ತಾರೀಖಿನೊಳಗಾಗಿ ಖಜಾನೆಯಲ್ಲಿ ಬಿಲ್ಲು ಡ್ರಾ ಮಾಡಿದ ಬಗ್ಗೆ ಖಜಾನೆ 62-ಬಿ ವರದಿಯನ್ನು ಪಡೆದುಕೊಂಡು ಅದರಲ್ಲಿ ಗಾಂಧಿ ಸಾಕ್ಷಿ ಕಾಯಕ ತಂತ್ರಾಂಶದ ಮೂಲಕ ಮಾಡಿದ ಪಾವತಿಯಾದ ವಿವರಗಳನ್ನು ಪರಿಶೀಲಿಸುವುದು.

ಇದೇ ರೀತಿ ಬ್ಯಾಂಕ್ ಮೂಲಕ ಪಾವತಿಯಾಗುವ ಕಾಮಗಾರಿಗಳ ಬಿಲ್ಲುಗಳ ವಿವರಗಳನ್ನು ಬ್ಯಾಂಕ್ ಖಾತೆಯ ತಃಖ್ತೆಯನ್ನು ಪಡೆದು ಪರಿಶೀಲಿಸಿ ಮೇಲಿನಂತೆಯೇ ಕ್ರಮ ಜರುಗಿಸುವುದು. ಇದು ಸರ್ಕಾರದ ಮಹತ್ವಾಕಾಂಕ್ಷೆಯ ಯೋಜನೆಯಾಗಿದ್ದು, ಇದನ್ನು ಅತ್ಯಂತ ಗಂಭೀರವೆಂದು ಪರಿಗಣಿಸಲು ಸೂಚಿಸಿದೆ.

ತಮ್ಮ ವಿಶ್ವಾಸಿ,

(ಟಿ. ಎಂ. ವಿಜಯ ಭಾಸ್ಕರ್)
ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು
ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆ.